DFA/45[redacted]2

ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ ಸದಸ್ಯರ ಹೆಸರು: | ಶ್ರೀ. ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 2318 |
| ಉತ್ತರಿಸಬೇಕಾದ ದಿನಾಂಕ: | 29-03-2021 |
| ಉತ್ತರಿಸುವ ಸಚಿವರು: | ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಮ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2020-21 ರ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಿದ್ಯಾರ್ಥಿಗಳು ಬ್ಯಾಂಕ್‌ಗಳ ಮೂಲಕ ಶುಲ್ಕ ಪಾವತಿಸಿದ್ದರೂ ಶುಲ್ಕ ಪ್ರಾಧಿಕಾರಕ್ಕೆ ಬಂದಿಲ್ಲ ಎಂಬ ಕಾರಣಕ್ಕೆ ಎಷ್ಟು ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣದ ಕೌನ್ಸಿಲಿಂಗ್‌ಗೆ ಹಾಜರಾಗಲು ಅವಕಾಶ ನಿರಾಕರಿಸಲಾಗಿದೆ: ವಿವರ ನೀಡುವುದು | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭಗೊಂಡು, ಪ್ರವೇಶಕ್ಕೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿ, ಶುಲ್ಕ ಪಾವತಿಯನ್ನು ಬ್ಯಾಂಕ್ ಮೂಲಕ ಚಲನ್ ಡೌನ್‌ಲೋಡ್ ಮಾಡಿಕೊಂಡು ನಿರ್ದಿಷ್ಟ ಬ್ಯಾಂಕ್‌ನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಖಾತೆಗೆ ಜಮಾ ಮಾಡಲು ತಿಳಿಸಲಾಗಿರುತ್ತದೆ. ಶುಲ್ಕ ಜಮೆ ಮಾಡುವ ವೇಳೆ ತಾಂತ್ರಿಕ ಕಾರಣಗಳಿಂದ ಜಮೆ ಮಾಡಿದ ಮೊತ್ತವು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಖಾತೆಗೆ ಜಮೆ (ಸರ್ವರ್‌ನಲ್ಲಿ ರಿಫ್ಲೆಕ್ಟ್) ಆಗದೆ ಇದ್ದರೆ, ಮೊತ್ತವು ರೆಮಿಟ್ ಆದ ಖಾತೆಗೆ ವಾಪಸ್ ಜಮೆಯಾಗಿರುತ್ತದೆ. ಜಮೆಯಾಗದೆ ಇದ್ದಲ್ಲಿ ಮುಂದಿನ ಪ್ರಕ್ರಿಯೆಗೆ ಪ್ರವೇಶ ಪತ್ರ ಡೌನ್‌ಲೋಡ್ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ, ಅಭ್ಯರ್ಥಿಗಳಿಂದ ಕಂಪ್ಲೆಂಟ್ ರೂಪದಲ್ಲಿ ಜಮೆಯಾದ ಚಲನ್‌ನ ವಿವರಗಳನ್ನು ಪಡೆದು ಜಮೆಯಾದ ಬಗ್ಗೆ ಬ್ಯಾಂಕಿನಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಗಣಕ ಶಾಖೆಯು ಪೂರ್ಣ ವಿವರವನ್ನು ಪಡೆದು ಜಮೆ ದೃಢೀಕರಣದ ನಂತರ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಲು ಮತ್ತು ಅಭ್ಯರ್ಥಿಯ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಲು ಅನುವು ಮಾಡಿಕೊಡಲಾಗುತ್ತದೆ. ಆದ್ದರಿಂದ, ಶುಲ್ಕ ಜಮೆ ಮಾಡಿದ ಯಾವುದೇ ಅಭ್ಯರ್ಥಿಯು ಪ್ರವೇಶ ಪ್ರಕ್ರಿಯೆಯಿಂದ ವಂಚಿತರಾಗಿರುವುದಿಲ್ಲ. |
| ಆ) | ಬ್ಯಾಂಕಿನ ಮೂಲಕ ಶುಲ್ಕ ಪಾವತಿಸಿದ ದಾಖಲೆಗಳನ್ನು ನೀಡಿದ ಬಳಿಕವು ಎಷ್ಟು ವಿದ್ಯಾರ್ಥಿಗಳಿಗೆ ವೈದ್ಯಕೀಯ ಕಾಲೇಜಿಗೆ ಪ್ರವೇಶಾತಿ ಪಡೆಯಲು ಸಾಧ್ಯವಾಗಿಲ್ಲ: (ಹೆಸರಿನೊಂದಿಗೆ ಮಾಹಿತಿ ನೀಡುವುದು) | |
| ಇ) | ಬ್ಯಾಂಕು ಅಥವಾ ಕೆ.ಎ.ಇಯಿಂದ ಆದ ತಪ್ಪಿಗೆ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗೆ ವೈದ್ಯಕೀಯ ಕಾಲೇಜಿಗೆ ಸೇರಲು ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಂಖ್ಯೆ: ಎಂಇಡಿ 53 ಆರ್‌ಜಿಯು 2021.

(ಡಾ: ಕೆ. ಸುಧಾಕರ್)

ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ

ಮತ್ತು ಕುಟುಂಬ ಕಲ್ಯಾಣ ಸಚಿವರು

[redacted]



Generated from eOffice by DR.K SUDHAKAR, [redacted](SK), MINISTER, MEDICAL EDUCATION SEC on 08/02/2022 09:18 PM

## Local References List

| Reference Attached | Attached By | Attached On |
|---|---|---|
| LC Q No 2318.pdf | RACHAYYA CHOUKIMATH,MED-R&I | 07/05/2021 03:10 PM |